# Mandya District Co-Operative Central Bank Ltd., Mandya, Karnataka.

Tender Ref:EST/ADM/Recruit:39:2024-25 Dated:05-12-2024

## ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ವಿವಿಧ ವೃಂದದ ಹುದ್ದೆಗಳ ನೇಮಕಾತಿ ಸಂಬಂಧ ಪರೀಕ್ಷಾ ಕೇಂದ್ರಗಳ ನಿಗದಿ, ಮೇಲ್ವಿಚಾರಣೆ ಮತ್ತು ಭದ್ರತೆ ಹಾಗೂ ಇನ್ನಿತರ ಕಾರ್ಯಗಳ ಸೇವೆಯನ್ನು ನಿರ್ವಹಿಸಲು ಬಾಹ್ಯ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.

## ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (QCBS Based)

## (Short term E-Tender)

**Address:**

Mandya District Co-Operative Central Bank Ltd.,
Head Office,
Post Box No: 14
Market Road, MANDYA – 571401
Phone: 08232-226010, 206011
Email:estadmmdydccb24@gamil.com

*Last Date for Submission:* ***12-12-2024***
*Before:* ***5.00 p.m.***

# ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ,

**ಪ್ರಧಾನ ಕಛೇರಿ, ಅಂಚೆ ಪೆಟ್ಟಿಗೆ ಸಂಖ್ಯೆ:14, ಮಾರ್ಕೆಟ್ ರಸ್ತೆ, ಮಂಡ್ಯ -571401.**

**ದೂರವಾಣಿ ಸಂಖ್ಯೆ:08232-226010, 226011 Email:estadmmdydccb24@gmail.com**

**ಸಂಖ್ಯೆ:ಆಡಳಿತ:ಸಿಬ್ಬಂದಿ:ನೇಮಕಾತಿ:39:2024-25** **ದಿನಾಂಕ:05-12-2024**

: ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ :

# E-PROCUREMENT TENDER NOTIFICATION (Short term E-Tender)

(ದ್ವಿ–ಲಕೋಟೆ ಪದ್ಧತಿ)

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರ ವಿವಿಧ ವೃಂದದ ಹುದ್ದೆಗಳ ನೇಮಕಾತಿ ಸಂಬಂದ ಪರೀಕ್ಷಾ ಕೇಂದ್ರಗಳ ನಿಗದಿ, ಮೇಲ್ವಿಚಾರಣೆ ಮತ್ತು ಭದ್ರತೆ ಹಾಗೂ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ. (ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ) (QCBS Based)

## Calendar of Events

### Bidding Schedule

| | |
|---|---|
| **ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ** | **ದಿನಾಂಕ: 12-12-2024,**<br>**ಸಾಯಂಕಾಲ:5-00 ಗಂಟೆವರೆಗೆ** |
| **1. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮತ್ತು ಪರಿಶೀಲಿಸುವ ದಿ ಮತ್ತು ಸಮಯ** | **ದಿನಾಂಕ: 13-12-2024**<br>**ಸಾಯಂಕಾಲ: 05-15 ಗಂಟೆ** |
| **2. ಆರ್ಥಿಕ ಬಿಡ್‌ಗಳನ್ನು ತೆರೆಯುವ ಮತ್ತು ಪರಿಶೀಲಿಸುವ ದಿನ ಮತ್ತು ಸಮಯ** | **ದಿನಾಂಕ: 16-12-2024,**<br>**ಬೆಳಗ್ಗೆ: 11-00 ಗಂಟೆ** |
| **3. ಬಿಡ್‌ಗಳನ್ನು ತೆರೆಯುವ ಸ್ಥಳ** | **ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,**<br>**ಪ್ರಧಾನ ಕಛೇರಿ, ಮಂಡ್ಯ** |
| **4. ಸಂಪರ್ಕಿಸಬೇಕಾದ ವಿಳಾಸ** | **ಮುಖ್ಯಕಾರ್ಯನಿರ್ವಹಣಾಧಿಕಾರಿ,**<br>**ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,**<br>**ಅಂಚೆಪೆಟ್ಟಿಗೆ ಸಂಖ್ಯೆ 14, ಮಾರ್ಕೆಟ್ ರಸ್ತೆ, ಮಂಡ್ಯ** |

**(ಸಹಿ/–)**

**ಮುಖ್ಯಕಾರ್ಯನಿರ್ವಹಣಾಧಿಕಾರಿ**

**ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ**

# ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ,

**ಪ್ರಧಾನ ಕಛೇರಿ, ಅಂಚೆ ಪೆಟ್ಟಿಗೆ ಸಂಖ್ಯೆ 14, ಮಂಡ್ಯ -571401**

ದೂರವಾಣಿ ಸಂಖ್ಯೆ: **08232-226010, 226011**

**ಸಂಖ್ಯೆ:ಆಡಳಿತ:ಸಿಬ್ಬಂದಿ:ನೇಮಕಾತಿ:39:2024-25** **ದಿನಾಂಕ:05-12-2024**

: ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ :

# E-PROCUREMENT TENDER NOTIFICATION (Short term E-Tender)

(ದ್ವಿ-ಲಕೋಟೆ ಪದ್ಧತಿ)

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರ ವಿವಿಧ ವೃಂದದ ಹುದ್ದೆಗಳ ನೇಮಕಾತಿ ಸಂಬಂದ ಪರೀಕ್ಷಾ ಕೇಂದ್ರಗಳ ನಿಗದಿ, ಮೇಲ್ವಿಚಾರಣೆ ಮತ್ತು ಭದ್ರತೆ ಹಾಗೂ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ. (ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ) (QCBS Based)

**ಅ) ಪೀಠಿಕೆ** :-

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರ ವಿವಿಧ ವೃಂದದ ಹುದ್ದೆಗಳ ನೇಮಕಾತಿ ಸಂಬಂಧ ಬ್ಯಾಂಕಿನಿಂದ ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ಈ ಸಂಬಂಧ ಬ್ಯಾಂಕಿಗೆ ಸ್ವೀಕೃತವಾಗಿರುವ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಲು ಪರೀಕ್ಷಾ ಕೇಂದ್ರಗಳನ್ನು ನಿಗದಿ ಮಾಡಲು, ಪರೀಕ್ಷಾ ಕೇಂದ್ರದ ಮೇಲ್ವಿಚಾರಣೆ, ಭದ್ರತೆ ಹಾಗೂ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವ ಸೇವೆಯನ್ನು ಬಾಹ್ಯ ಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ (KTPP) 1999 ಮತ್ತು ನಿಯಮಗಳು 2000ರ ಪ್ರಕಾರ E-procurement ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಲಾಗಿದೆ.

**ಆ) ಟೆಂಡರ್ ದಾಖಲೆಗಳು ಸೂಚನೆಗಳು** :-

**01. ಟೆಂಡರ್ ಉದ್ದೇಶ** :-

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರ ವಿವಿಧ ವೃಂದದ ಹುದ್ದೆಗಳ ನೇಮಕಾತಿ ಸಂಬಂಧ ಬ್ಯಾಂಕಿನಿಂದ ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ಈ ಸಂಬಂಧ ಬ್ಯಾಂಕಿಗೆ ಸ್ವೀಕೃತವಾಗಿರುವ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಲು ಮಂಡ್ಯ ನಗರದಲ್ಲಿ ಪರೀಕ್ಷಾ ಕೇಂದ್ರಗಳನ್ನು ನಿಗದಿ ಮಾಡಲು, ಪರೀಕ್ಷಾ ಕೇಂದ್ರದ ಮೇಲ್ವಿಚಾರಣೆ, ಭದ್ರತೆ ಹಾಗೂ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವ ಸೇವೆಯನ್ನು ಬಾಹ್ಯ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇವರಿಂದ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಸೇವೆಯನ್ನು ಒದಗಿಸಲು ಅರ್ಹತೆಯುಳ್ಳ ಮತ್ತು

ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೊಂದಣಿ ಮಾಡಿಕೊಂಡ ವ್ಯಕ್ತಿಗಳು/ ಸಂಸ್ಥೆಗಳು ನಿಗದಿತ ಟೆಂಡರ್ ಫಾರಂನಲ್ಲಿ ಅರ್ಜಿ ಸಲ್ಲಿಸಬಹುದು. ಟೆಂಡರ್ ಫಾರಂ ಹಾಗೂ ವಿವರಗಳನ್ನು https://kppp.karnataka.gov.in/ ನಿಂದ ಪಡೆಯಬಹುದಾಗಿದೆ.

**02. ಟೆಂಡರ್‌ದಾರರ ಅರ್ಹತೆ :-**

ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಈ ಟೆಂಡರ್‌ನ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ ಲಿಖಿತ ಪತ್ರವನ್ನು ನೀಡಿ ಟೆಂಡರ್ ಕರೆದಿರುವ ಪ್ರಾಧಿಕಾರದಿಂದ ಮಾಹಿತಿ ಪಡೆಯಬಹುದು.

## ***ಷರತ್ತು ಮತ್ತು ನಿಬಂಧನೆಗಳು***

1. ಬ್ಯಾಂಕಿನ ನೇಮಕಾತಿಗೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ಬರೆಯಲು ಅನುಕೂಲವಾಗುವಂತೆ ಟೆಂಡರುದಾರರು ಮಂಡ್ಯ ನಗರದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುವ ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು.
2. ಟೆಂಡರುದಾರರು ಲಿಖಿತ ಪರೀಕ್ಷೆಗಳಿಗೆ ಆಯ್ಕೆ ಮಾಡಲಾಗಿರುವ ಪರೀಕ್ಷಾ ಕೇಂದ್ರಗಳ ಮಾಹಿತಿ, ಪರೀಕ್ಷಾ ಕೊಠಡಿಗಳ ಸಂಖ್ಯೆ, ಪ್ರತಿ ಕೊಠಡಿಯಲ್ಲಿ ಎಷ್ಟು ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಸ್ಥಳಾವಕಾಶ ಮಾಡಲಾಗಿದೆ ಎಂಬ ಬಗ್ಗೆ ನಿಖರ ವಿವರವಾದ ಮಾಹಿತಿಯನ್ನು ಬ್ಯಾಂಕಿಗೆ ಸಲ್ಲಿಸಲು ಕ್ರಮವಿಡುವುದು.
3. ಟೆಂಡರುದಾರರು ಪರೀಕ್ಷಾ ಕೇಂದ್ರಗಳನ್ನು ಪಡೆಯುವುದು, ಬಿಗಿ ಭದ್ರತಾ ವ್ಯವಸ್ಥೆಯೊಂದಿಗೆ ಪರೀಕ್ಷೆಯ ಮೇಲ್ವಿಚಾರಣೆ, ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಸಿ.ಸಿ.ಕ್ಯಾಮೆರಾ ವ್ಯವಸ್ಥೆ, ವಿಡಿಯೋ ರೆಕಾರ್ಡಿಂಗ್, ಪ್ರಥಮ ಚಿಕಿತ್ಸೆ, ಅಭ್ಯರ್ಥಿಗಳಿಗೆ ನೀರಿನ ಸೌಕರ್ಯ ಹಾಗೂ ಮುಂತಾದ ಎಲ್ಲಾ ಮೂಲಭೂತ ಸೌಲಭ್ಯಗಳ ವ್ಯವಸ್ಥೆ ಮಾಡುವುದು.
4. ಟೆಂಡರುದಾರರು ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಡೆಸ್ಕ್/ ಬೆಂಚ್ ವ್ಯವಸ್ಥೆ, ನೊಂದಣಿ ಸಂಖ್ಯೆ(Roll Number)ಯನ್ನು ನಮೂದಿಸುವುದು. ಪ್ರತಿ ಕೊಠಡಿಯ ಹೊರಗೆ ಅಭ್ಯರ್ಥಿಗಳ ನೊಂದಣಿ ಸಂಖ್ಯೆಯನ್ನು ಒಳಗೊಂಡ ಪಟ್ಟಿ ಪ್ರಕಟಿಸುವುದು.
5. ಪ್ರತಿ ಕೊಠಡಿಯಲ್ಲಿ ಅಭ್ಯರ್ಥಿಗಳ ನೊಂದಣಿ ಸಂಖ್ಯೆಯನ್ನು ಒಳಗೊಂಡ ಪಟ್ಟಿ ಪ್ರಕಟಿಸುವುದು ಮತ್ತು ಕೊಠಡಿಯ ಮುಂಭಾಗಿನ ಮೇಲೆ ಸಂಬಂಧಿಸಿದ ನೋಂದಣಿ ಸಂಖ್ಯೆಯನ್ನು ಅಂಟಿಸುವುದು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯದ್ವಾರದಲ್ಲಿ ನೊಂದಣಿ ಸಂಖ್ಯೆಯನ್ನು ಒಳಗೊಂಡ ಕೊಠಡಿ, ಅಂತಸ್ತು ವಿವರಗಳನ್ನು ಪ್ರಕಟಿಸುವುದು.
6. ಲಿಖಿತ ಪರೀಕ್ಷೆಗೆ ಅವಶ್ಯವಿರುವ ನುರಿತ ಪರೀಕ್ಷಾ ಸಿಬ್ಬಂದಿಯನ್ನು ವ್ಯವಸ್ಥೆ ಮಾಡುವುದು.
7. ಲಿಖಿತ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕಾಲೇಜು/ ಶಾಲೆಗಳಲ್ಲಿ ಸೂಕ್ತ ಭದ್ರತಾ ವ್ಯವಸ್ಥೆ ಮಾಡುವುದು.
8. ಪರೀಕ್ಷಾ ಸಿಬ್ಬಂದಿಗೆ ಅವಶ್ಯ ತರಬೇತಿ ನೀಡುವುದು.
9. ಟೆಂಡರುದಾರರು ಪರೀಕ್ಷಾ ಕೊಠಡಿಯಲ್ಲಿ ಕನಿಷ್ಠ 20 ರಿಂದ 25 ಅಭ್ಯರ್ಥಿಗಳಿಗೆ ಒಬ್ಬ ಪರೀಕ್ಷಾ ಮೇಲ್ವಿಚಾರಕರನ್ನು ನಿಯೋಜಿಸುವುದು ಹಾಗೂ 03 ರಿಂದ 04 ಕೊಠಡಿಗೆ ಒಬ್ಬ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸುವುದು.

10.ಟೆಂಡರುದಾರರು ಪರೀಕ್ಷೆಗೆ ಹಾಜರಾಗುವ ಪ್ರತಿಯೊಬ್ಬ ಅಭ್ಯರ್ಥಿಯ ಪರೀಕ್ಷಾ ಪ್ರವೇಶ ಪತ್ರ (Hall Ticket) ವನ್ನು ಮತ್ತು ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷಿಸಿ ಪರೀಕ್ಷಾ ಕೊಠಡಿಯೊಳಗೆ ಬಿಡುವುದು.

11.ಟೆಂಡರುದಾರರು ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ Mobile, Bluetooth, Head Phone, Smart Watch ಹಾಗೂ ಇನ್ನಿತರ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಕಡ್ಡಾಯವಾಗಿ ಬಳಸದಂತೆ ನಿರ್ಬಂಧಿಸುವುದು.

12.ಟೆಂಡರುದಾರರು ಪ್ರಕ್ರಿಯೆಯ ಯಾವುದೇ ಹಂತವನ್ನು ಉಪಗುತ್ತಿಗೆ (Sub-lease) ನೀಡದೇ ಸಂಪೂರ್ಣ ಪ್ರಕ್ರಿಯೆಯನ್ನು ನಿರ್ವಹಿಸಬೇಕು.

13.ಟೆಂಡರುದಾರರು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಹಾಗೂ ಕೊಠಡಿ ಮೇಲ್ವಿಚಾರಕರ ಸಹಿಯನ್ನು ಒಳಗೊಂಡಂತೆ ಹಾಜರಾತಿ ಪಟ್ಟಿಯನ್ನು ಪರೀಕ್ಷೆ ನಡೆದ ದಿನದಂದೇ ಧೃಢೀಕರಿಸಿ ಬ್ಯಾಂಕಿಗೆ ಸಲ್ಲಿಸುವುದು.

14.ಪರೀಕ್ಷಾ ಕೇಂದ್ರಗಳನ್ನು ನಿಗದಿ ಮಾಡುವ, ಪರೀಕ್ಷಾ ಕೇಂದ್ರದ ಮೇಲ್ವಿಚಾರಣೆ, ಭದ್ರತೆ ಹಾಗೂ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವ ಸಂಬಂಧ ಬಿಡ್ಡುದಾರರ ವಿರುದ್ಧ ಯಾವುದೇ ದೂರುಗಳು ದಾಖಲಾಗಿ ಸಾಭೀತಾಗಿರಬಾರದು.

15.ಪರೀಕ್ಷಾ ಕೇಂದ್ರದಲ್ಲಿ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮಕೈಗೊಳ್ಳುವುದು.

16.ಬಿಡ್ಡುದಾರರು ISO 9001:2015, ISO 27001:2013 ಮತ್ತು CMMI-3 ಪ್ರಮಾಣೀಕೃತ ಭಾರತೀಯ ಕಂಪನಿ/ಏಜೆನ್ಸಿ/ ಸಂಸ್ಥೆಯು ಭಾರತದಲ್ಲಿ ನೊಂದಾಯಿಸಲ್ಪಟ್ಟಿರಬೇಕು ಮತ್ತು ಕಳೆದ 10 ವರ್ಷಗಳಿಂದ ಕಾರ್ಯಾಚರಣೆಯಲ್ಲಿರಬೇಕು.

17.ಬಿಡ್ಡುದಾರರು ಸಹಕಾರ ಸಂಸ್ಥೆಗಳು/ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ನೇಮಕಾತಿ ಸಂಬಂಧ ಪರೀಕ್ಷಾ ಕೇಂದ್ರಗಳನ್ನು ಗುರುತಿಸುವಿಕೆ, ಮೇಲ್ವಿಚಾರಣೆ, ಭದ್ರತೆ ಹಾಗೂ ಇನ್ನಿತರ ಕಾರ್ಯಗಳನ್ನು ಕನಿಷ್ಠ 10(ಹತ್ತು) ಯೋಜನೆಗಳನ್ನು ಮತ್ತು ಸಹಕಾರ ಸಂಸ್ಥೆಗಳ ಕನಿಷ್ಠ 2(ಎರಡು) ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಪೂರ್ಣಗೊಳಿಸಿರಬೇಕು. ಹಾಗೂ ಸೇವೆ ಸಲ್ಲಿಸಿದ ಸಂಸ್ಥೆಗಳಿಂದ ತೃಪ್ತಿಕರ ಸೇವೆಯ ಬಗ್ಗೆ ದೃಢೀಕರಣ ಪತ್ರ ಹೊಂದಿರಬೇಕು.

18.ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೂ ಛಾಪಾ ಕಾಗದದಲ್ಲಿ ಕಪ್ಪು ಪಟ್ಟಿಯಲ್ಲಿ ಸೇರದೇ ಇರುವ ಬಗ್ಗೆ ಅಫಿಡವಿಟ್ ಮೂಲ ಪ್ರತಿಯ ದೃಢೀಕೃತ ಪ್ರತಿ ಹೊಂದಿರಬೇಕು.

19.ರಾಜ್ಯ/ಜಿಲ್ಲಾ ಮಟ್ಟದ ಸಹಕಾರ ಸಂಸ್ಥೆ/ ಸಹಕಾರ ಬ್ಯಾಂಕುಗಳ ಸ್ಪರ್ಧಾತ್ಮಕ ಪರೀಕ್ಷೆಗೆ ಕನಿಷ್ಠ 5000 (ಐದು ಸಾವಿರ) ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ ಯಶಸ್ವಿಯಾಗಿ ಪರೀಕ್ಷೆ ನಡೆದಿರುವ ಬಗ್ಗೆ ಅನುಭವ ಹೊಂದಿರಬೇಕು ಹಾಗೂ ಸಂಬಂಧಿಸಿದ ಸಹಕಾರ ಸಂಸ್ಥೆ/ ಸಹಕಾರ ಬ್ಯಾಂಕುಗಳಿಂದ ಪಡೆದ ಧೃಢೀಕರಣ ಪತ್ರ ಸಲ್ಲಿಸುವುದು.

20.ಸದರಿ ಟೆಂಡರ್ ಪ್ರಕ್ರಿಯೆಯು QCBS (Quality Cum Cost -Based selection) ಮಾದರಿಯ ಟೆಂಡರ್ ಆಗಿರುತ್ತದೆ.

21.ಟೆಂಡರ್‌ದಾರರು 2021-22, 2022-23, ಹಾಗೂ 2023-24 ಸಾಲಿನ ಹಣಕಾಸು ವರ್ಷದ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ಬಗ್ಗೆ ಸ್ವೀಕೃತ ದಾಖಲೆ, ರಿಟರ್ನ್ ಪ್ರತಿ ಮತ್ತು ಸದರಿ ಸಾಲಿನ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳು (Audited profit & loss account & balance sheet) ದೃಢೀಕೃತ ಪತ್ರಗಳನ್ನು ಸಲ್ಲಿಸುವುದು.

22.ಟೆಂಡರ್‌ದಾರರು 2021-22, 2022-23, ಹಾಗೂ 2023-24 ಮಾರ್ಚ್ ಪ್ರತಿ ಸಾಲಿನಲ್ಲಿಯೂ ಪ್ರತಿ ವಾರ್ಷಿಕ ವಹಿವಾಟು ರೂ.2.50 ಕೋಟಿ (ಎರಡು ಕೋಟಿ ಐವತ್ತು ಲಕ್ಷ) ವಹಿವಾಟಿಗಿಂತ ಕಡಿಮೆ ಇರಬಾರದು. ವಹಿವಾಟಿನ ಆಡಿಟ್ ವರದಿಗಳನ್ನು ಸಲ್ಲಿಸಬೇಕು.

23.ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ & ಟೆಂಡರ್ ನೀಡುವ ಮೊದಲು ಯಾವುದೇ ಸಮಯದಲ್ಲಿ ಟೆಂಡರು ಪ್ರಕ್ರಿಯೆಯನ್ನು ರದ್ದುಗೊಳಿಸುವ & ಕಡಿಮೆ ದರ ನಮೂದಿಸಿದ ಟೆಂಡರುದಾರರಿಗೆ ಮಾತ್ರ ದರಗಳನ್ನು ಇತ್ಯರ್ಥ ಮಾಡುವ ಅಥವಾ ಒಂದೇ ದರವನ್ನು ಒಂದಕ್ಕಿಂತ ಹೆಚ್ಚು ಟೆಂಡರ್‌ದಾರರು ನಮೂದಿಸಿದ್ದಲ್ಲಿ ಅಂತಿಮವಾಗಿ ಒಪ್ಪಿಕೊಳ್ಳುವ /ತಿರಸ್ಕರಿಸುವ ಅಧಿಕಾರವನ್ನು ಬ್ಯಾಂಕಿನ ಆಡಳಿತ ಮಂಡಳಿಯು ಕಾಯ್ದಿರಿಸಿಕೊಂಡಿದೆ.

24.ಟೆಂಡರು ದರ ಅನುಸೂಚಿಯಲ್ಲಿ ಒಳಗೊಂಡಿರುವುದು ಏನೇ ಆದಾಗ್ಯೂ ಕಡಿಮೆ ದರ ನಮೂದಿಸಿದ ಟೆಂಡರನ್ನು ಅಂಗೀಕರಿಸಲೇಬೇಕು ಎಂಬ ನಿರ್ಬಂಧ (Obligation) ಇರುವುದಿಲ್ಲ. ಆ ಕಾರಣದಿಂದ ಭಾಧಿತರಾದ ಟೆಂಡರುದಾರರಿಗೆ ಬ್ಯಾಂಕು ಯಾವುದೇ ಹೊಣೆಗೆ ಗುರಿಯಾಗುವುದಿಲ್ಲ ಅಥವಾ ಬ್ಯಾಂಕು ಕ್ರಮ ಕೈಗೊಂಡ ಬಗ್ಗೆ ಕಾರಣಗಳನ್ನು ಭಾದಿತ ಟೆಂಡರುದಾರರಿಗೆ ತಿಳಸಬೇಕಾದ ಬಾಧ್ಯತೆಯಿರುವುದಿಲ್ಲ. ಈ ಟೆಂಡರಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳನ್ನು ಬ್ಯಾಂಕು ಕೈಗೊಳ್ಳುವ ತೀರ್ಮಾನವೇ ಅಂತಿಮವಾಗಿದ್ದು ಟೆಂಡರುದಾರರು ಇದಕ್ಕೆ ಬದ್ಧವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.

25.ಟೆಂಡರುದಾರರು ಮಾಹಿತಿಯನ್ನು ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಮಾತ್ರ ನಮೂದಿಸಬೇಕು.

26.ಇ_ಪೋರ್ಟಲ್‌ನಲ್ಲಿ ಸೇವಾ ಶುಲ್ಕದ ಜೊತೆಗೆ ಒಟ್ಟು ಜಿಎಸ್‌ಟಿ ಮೊಬಲಗನ್ನು ನಮೂದಿಸುವುದು.

27.ಬಿಡ್ಡುದಾರ ಸಂಸ್ಥೆಯು ಕರ್ನಾಟಕದಲ್ಲಿ ನೊಂದಾಯಿಸಿ, ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ಸಂಸ್ಥೆಯಾಗಿರಬೇಕು.

28.ಷರತ್ತು ಪೂರ್ವಕ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ, ಟೆಂಡರುದಾರರು ಟೆಂಡರು ದಸ್ತಾವೇಜಿನೊಂದಿಗೆ ಬ್ಯಾಂಕಿನ ಷರತ್ತುಗಳಿಗೆ ಯಾವುದೇ ಪ್ರತಿ ಷರತ್ತುಗಳನ್ನು ವಿಧಿಸಬಾರದು. ಒಂದು ವೇಳೆ ವಿಧಿಸಿದಲ್ಲಿ ಬ್ಯಾಂಕು ಅದಕ್ಕೆ ಬದ್ಧವಲ್ಲ. ಅಂತಹ ಟೆಂಡರ್‌ರನ್ನು ಅಂಗೀಕರಿಸಲಾಗುವುದಿಲ್ಲ.

29.ಹೊರಗುತ್ತಿಗೆ ನೀಡುವ ಸಮಯದಲ್ಲಿ ದರದಲ್ಲಿ ಅಥವಾ ಇತರ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಹೊರಗುತ್ತಿಗೆ ಕೆಲಸದ ಪರಿಮಾಣವನ್ನು ಹಂಚಿಕೆ ಮಾಡುವ ಅಧಿಕಾರವನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.

30.ಬ್ಯಾಂಕು ಕಾಲಕಾಲಕ್ಕೆ ನಿಗದಿಪಡಿಸುವ ಇನ್ನಿತರೆ ಕಾರ್ಯಗಳನ್ನು ನಿರ್ವಹಿಸುವುದು.

31.ಯಾವುದೇ ವಿವಾದಗಳು ಉಂಟಾದಲ್ಲಿ ಮಂಡ್ಯ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ನೇಮಕಾತಿ ಸಮಿತಿಯ ಅಥವಾ ಮುಖ್ಯಕಾರ್ಯನಿರ್ವಹಣಾಧಿಕಾರಿರವರ ನಿರ್ಣಯವೇ ಅಂತಿಮವಾಗಿರುತ್ತದೆ.

32.ಟೆಂಡರುದಾರರು ಒದಗಿಸುವ ಸೇವೆಗಳಿಂದ ಯಾವುದೇ ವಿವಾದ ಉಂಟಾದರೆ ಬ್ಯಾಂಕು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು ಹಾಗೂ ಯಾವುದೇ ವಿವಾದ/ ವ್ಯಾಜ್ಯವು ಮಂಡ್ಯ ಅಥವಾ ಬೆಂಗಳೂರು ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

33.ಬ್ಯಾಂಕ್ ಕಾಲಕಾಲಕ್ಕೆ ವಿಧಿಸುವ ನಿಬಂಧನೆಗಳಿಗೆ ಟೆಂಡರ್‌ದಾರರು ಬದ್ಧರಾಗಿರಬೇಕು.

**03. ತಾಂತ್ರಿಕ ಬಿಡ್ಡು ತೆರೆದು ಮೌಲ್ಯಮಾಪನ ಮಾಡುವ್ವದು:**

ಈ ವಿಭಾಗದಲ್ಲಿ ಕೆಳಗಿನ ಅಂಶಗಳ ರೀತ್ಯಾ ತಾಂತ್ರಿಕ ಬಿಡ್‌ಗಳನ್ನು ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡುವ ವಿಧಾನವನ್ನು ವಿವರಿಸಲಾಗಿದೆ. ಬಿಡ್ಡುದಾರರು ಸಲ್ಲಿಸಿದ ದಾಖಲಾತಿಗಳನ್ನು ಈ ಕೆಳಗಿನ ನಿಯತಾಂಕಗಳ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ.

- ಕಂಪನಿಯ ಪ್ರೋಫೈಲ್
- ಅರ್ಹತಾ ಮಾನದಂಡಗಳು
- ಹಿಂದಿನ ಅನುಭವ
- ತಾಂತ್ರಿಕ ಪ್ರಸ್ತಾವನೆ ಮತ್ತು ಅನುಬಂಧಗಳು

ಬಿಡ್ಡುದಾರರ ತಾಂತ್ರಿಕ ಅಂಶಗಳನ್ನು ನಿರ್ಧರಿಸಲು ಈ ಮೇಲಿನ ಅಂಶಗಳಿಗೆ ಅಂಕಗಳನ್ನು ನಿಗದಿಪಡಿಸಲಾಗಿದೆ.

**ಅಂಕಗಳ ವಿಧಾನ:**

| **ಅಂಕದ ವಿಧಾನ** | **ಗರಿಷ್ಠ ಅಂಕ** |
|---|---|
| ಕಂಪನಿ ಪ್ರೋಫೈಲ್ | 20 |
| ಅರ್ಹತಾ ಮಾನದಂಡಗಳು | 25 |
| ಹಿಂದಿನ ಅನುಭವ | 30 |
| ತಾಂತ್ರಿಕ ಪ್ರಸ್ತಾವನೆ ಮತ್ತು ಅನುಬಂಧಗಳು | 25 |
| **ಒಟ್ಟು** | **100** |

ಸದರಿ ಟೆಂಡರ್ ಪ್ರಕ್ರಿಯೆಯು QCBS (Quality Cum Cost -Based selection) ಮಾದರಿಯ ಆಗಿರುವುದರಿಂದ ತಾಂತ್ರಿಕ ಅಂಶಗಳಿಗೆ ಶೇ.70% ಮತ್ತು ವಾಣಿಜ್ಯ ಅಂಶಗಳಿಗೆ ಶೇ.30% ರಷ್ಟು ಒಳಗೊಂಡಿರುತ್ತದೆ. **(Technical weightage will be 70% and Commercial Weightage will be 30%)**

**04. ಇ.ಎಂ.ಡಿ ಮೊತ್ತ :–**

ಟೆಂಡರ್‌ಗೆ ನಿಗದಿಪಡಿಸಲಾಗಿರುವ ಇ.ಎಂ.ಡಿ ಮೊತ್ತ ರೂ.1,00,000/-ಆಗಿರುತ್ತದೆ. (ಒಂದು ಲಕ್ಷ ರೂ.ಗಳು ಮಾತ್ರ) ಸದರಿ ಇ.ಎಂ.ಡಿ ಮೊತ್ತವನ್ನು e-Proccurement portal ಮೂಲಕ Credit/ Debit Card/Net Banking ಅಥವಾ e-portal ನಲ್ಲ ಪಾವತಿಸಲು ಲಭ್ಯವಿರುವ ಇತರ ಅವಕಾಶಗಳ ಮೂಲಕ ಪಾವತಿಸುವುದು ಹಾಗೂ ಇ–ಟೆಂಡರ್ ದಸ್ತಾವೇಜಿನ ಜೊತೆಗಿರುವ ನಮೂನೆಯಲ್ಲಿ ಇ.ಎಂ.ಡಿ. ಪಾವತಿಸಿದ ಮಾಹಿತಿಯನ್ನು ಸಲ್ಲಿಸುವುದು.

ಯಶಸ್ವಿ ಟೆಂಡರ್‌ದಾರರು ಕಾರ್ಯಾದೇಶ ಪಡೆದ ಕೂಡಲೇ ಕರಾರು ಮಾಡಿಸಿಕೊಳ್ಳುವುದು. ಕರಾರು ಮಾಡಿಕೊಳ್ಳದೇ ಇದ್ದಲ್ಲಿ ಇ.ಎಂ.ಡಿ ಬಾಬ್ತನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೇ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲೂ ಸಹ ಕಾರ್ಯದೇಶ ರದ್ದುಪಡಿಸಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಯಶಸ್ವಿಯಾಗದ ಟೆಂಡರ್‌ದಾರರ ಇ.ಎಂ.ಡಿಯನ್ನು ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶ ನೀಡಿದ ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು. ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶದ ಅವಧಿಯ ಅಂತ್ಯದವರೆಗೆ ಯಾವುದೇ ಕಾರಣಕ್ಕೂ ಇ.ಎಂ.ಡಿ ಮತ್ತು ಕಾರ್ಯಾಧಾರಿತ ಭದ್ರತಾ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.

ಟೆಂಡರ್ ಅರ್ಜಿ ಬೆಲೆಯನ್ನು ಇ–ಸಂಗ್ರಹಣಾ ನಿಯಮದ ಪ್ರಕಾರ ಇ–ಪೋರ್ಟಲ್ ಮೂಲಕ ಪಾವತಿಸಬೇಕು.

**<u>Documents to be submitted with tender form (Technical bid form) for tender approval :</u>**

1) Copy of the registration certificate with the Labour Department.
2) Copy of the GST registration certificate.
3) Copy of the PAN Card.
4) Copy of the Profession Tax Registration obtained from Government.
5) List of Clients with reference and number of years of experience.
6) EMD Payments
7) Experience Certificate
8) ISO Certificate /CMMI-3/ ISO 27001
9) GST FILED COPY FOR LAST 6 MONTHS
10) Last 3 years Audited profit and loss statement with filed acknowledgement

# DETAILS OF THE SERVICE PROVIDER

| Sl. No | PARTICULARS | RESPONSE |
|---|---|---|
| 1 | **DETAILS OF THE BIDDER** | |
| A | Name of Bidder | |
| B | Bidder Head Office and registered office address | |
| C | Telephone and Fax numbers | |
| D | Authorized Contact Person of the Bidder:<br>Name:<br>Contact No:<br>E-Mail ID: | |
| E | Date of incorporation<br>(Please enclose Bidder Registration Certificate) | |
| F | Ownership structure<br>(e.g. Proprietorship, Partnership, Pvt. / Pub Ltd Bidder) | |
| G | Bidder GST registration number (Please enclose supporting document.)<br>Last 6 months GSTR 3B copy to be enclosed | |
| H | Bidder PAN & TIN number.<br>(Please enclose supporting document) | |
| I | Quality Certification Please enclose copies of Quality Certificates<br>(ISO/ CMM etc.,) if any | |

**ಸಹಿ/–**
**ಮುಖ್ಯಕಾರ್ಯನಿರ್ವಹಣಾಧಿಕಾರಿ**
**ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ**

**UNDERTAKING REGARDING BLACKLISTING**
**(On Rs.200 stamp paper)**

We hereby confirm and declare that we, M/s_____________________________, is not blacklisted/ De-registered/ debarred by any Government department/ Public Sector Undertaking/ Private Sector/ or any other agency for which we have Executed/ Undertaken the works/ Services during the last 5 years.

For Authorised Signatory

Date: